

## ಇನ್ನೂ ಸತ್ತಿಲ್ಲ

ಸುಮಾರು 40 ವರ್ಷ ಹಿಂದಿನ ಘಟನೆ. ನಾನಾಗ ಬೆಂಗಳೂರಿನ ಪೀಣ್ಯ ದಾಸರಹಳ್ಳಿಯಲ್ಲಿ ಪಶುವೈದ್ಯ ಪರೀಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದೆ. ಅಲ್ಲಿನ ಜಿಲ್ಲಾ ಪಂಚಾಯಿತ್ತಿ ಸದಸ್ಯರೊಬ್ಬರು ನನ್ನನ್ನು ಕರೆಸಿ, 'ನೋಡಪ್ಪ ಇವರ(ರೈತರೊಬ್ಬರನ್ನು ತೋರಿಸಿ) ಹಸು ಸತ್ತುಹೋಗಿದೆಯಂತೆ, ಇನ್ಶೂರೆನ್ಸ್ ಬರಲು ಏನು ಬೇಕೊ ಎಲ್ಲಾ ಮಾಡಿಕೊಡಪ್ಪ' ಎಂದರು. ಪೋಸ್ಟ್‌ಮಾರ್ಟಮ್ ಮಾಡಿ ಅದರ ವರದಿ ಕೊಡಬೇಕಾಗಿದ್ದರಿಂದ ಮಲ್ಲೇಶ್ವರದ ಸಹಾಯಕ ನಿರ್ದೇಶಕರಿಗೆ ಫೋನ್ ಮಾಡಿ ಅವರನ್ನು ಕರೆಸಿಕೊಂಡು ಆ ರೈತನ ಮನೆ ಹುಡುಕಿಕೊಂಡು ಹೋದೆವು. ಅಲ್ಲಿ ನೋಡಲಾಗಿ ಒಂದು ವಯಸ್ಸಾದ ಹಸು ಮಲಗಿಕೊಂಡು ಮೆಲುಕು ಹಾಕುತ್ತಿತ್ತು. ನಾವು ಮನೆಯವರಿಗೆ, 'ಸತ್ತ ಹಸು ಎಲ್ಲಿ?' ಎಂದು ಕೇಳಿದೆವು. ಅದಕ್ಕೆ ಮನೆಯವರು ವಯಸ್ಸಾದ ಹಸುವನ್ನು ತೋರಿಸುತ್ತಾ, 'ನೀವು ಬರುವುದರೊಳಗೆ ಸತ್ತುಹೋಗಿರುತ್ತದೆ ಎಂದುಕೊಂಡಿದ್ದೆವು. ಇನ್ನೂ ಸತ್ತಿಲ್ಲ, ಸಾರ್' ಎನ್ನಬೇಕೆ!

**ಕೆ. ಸಿದ್ದಯ್ಯ, ಬೆಂಗಳೂರು**

## 'ಏಟು ಕೊಟ್ಟರು'

ಊರಿಗೆ ಹೋಗಬೇಕಾದುದರಿಂದ ರೈಲಿನಲ್ಲಿ ಸ್ಥಳ ಕಾದಿರಿಸಲು ಹೋಗಿದ್ದ ಶ್ರೀಧರ ಮನೆಗೆ ವಾಪಸು ಬಂದ ಮೇಲೆ ಅವರಮ್ಮ ಕೇಳಿದರು: 'ರಿಸರ್ವೇಷನ್ ಆಯ್ತೇನಪ್ಪ?'

ಶ್ರೀಧರ ಹೇಳಿದ: 'ಏಟು' ಕೊಟ್ಟರು ಅಮ್ಮ.'

ಅಲ್ಲೇ ನಿಂತಿದ್ದ ಪುಟ್ಟಿ ಕೇಳಿದಳು: 'ಯಾಕೆ ಮಾವ, ಸೀಟು ಕೊಡುವ ಬದಲು ಏಟು ಕೊಟ್ಟರು?'

ಗಲಿಬಿಲಿಗೊಂಡಿದ್ದ ಪುಟ್ಟಿಗೆ ಶ್ರೀಧರ ನಿಧಾನವಾಗಿ ವಿವರಿಸಿದ: 'ಸೀಟು ಕೊಟ್ಟರು ಪುಟ್ಟಿ, 'ಏ' ಅಂದರೆ ಭೋಗಿ ಹೆಸರು, 'ಟು' ಅಂದರೆ ಸೀಟು ನಂಬರು ಅಷ್ಟೆ. (A–2).'

ಪುಟ್ಟಿ 'ಓ ಹೌದಾ?' ಎಂದಾಗ ಎಲ್ಲರೂ ನಗು ತಡೆಯದಾದರು.

**ಎಂ.ಆರ್. ರಘುನಾಥ್, ಬೆಂಗಳೂರು**

